# ಕನ್ನಡ ದಿನ ಪತ್ರಿಕೆಗಳಲ್ಲಿ ಮೂಡಿ ಬರುವ ಪೌರಾಣಿಕ ಕಥೆಗಳ ಕುರಿತು ಒಂದು ಅಧ್ಯಯನ

**ಮುನಿಸ್ವಾಮಿ**[1]
ಸಂಶೋಧನಾ ವಿದ್ಯಾರ್ಥಿ
ವಿದ್ಯುನ್ಮಾನ ಮಾಧ್ಯಮ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ.
muniswamy22@gmail.com

**ಡಾ. ಟಿ. ಶ್ರೀಪತಿ**[2]
ಸಹಾಯಕ ಪ್ರಾಧ್ಯಾಪಕರು
ವಿದ್ಯುನ್ಮಾನ ಮಾಧ್ಯಮ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ.
sripathy@bub.ernet.in

**Article Link: https://aksharasurya.com/2023/06/muniswamy-t-sripathy/**

**ಸಂಶೋಧನಾ ಸಾರಾಂಶ:**

ಯಾವುದೇ ಸಂಸ್ಕೃತಿ ಅಥವಾ ಧರ್ಮದಲ್ಲಿನ ದಂತಕಥೆಗಳನ್ನೇ ಪುರಾಣಗಳು ಎನ್ನಲಾಗುತ್ತದೆ. ಪುರಾಣಗಳು ಆಡುಭಾಷೆಯ ರೂಪದಲ್ಲಿ ಅಥವಾ ಲಿಖಿತ ರೂಪದಲ್ಲಿ ಸಾಂಪ್ರದಾಯಿಕವಾಗಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲಾಗುತ್ತವೆ. ಅನೇಕ ಬಾರಿ ಇವುಗಳು ಆ ಸಂಸ್ಕೃತಿಯ ಅಥವಾ ಧರ್ಮದ ನಾಯಕರ ಅಥವಾ ದೇವತೆಗಳ ಅತಿಮಾನುಷ ಕಾರ್ಯಗಳನ್ನು ರಂಜಿತವಾಗಿ ವರ್ಣಿಸುತ್ತವೆ. ಇಂಗ್ಲೀಷ್ ಲೇಖಕ ಕ್ಯಾಸಿಡಿ ಅವರ ಪ್ರಕಾರ "ಒಂದು ಪುರಾಣವು ಇಂದ್ರೀಯ ಚಿತ್ರಣ ಮತ್ತು ಪ್ರಾತಿನಿಧ್ಯ, ಒಂದು ರೀತಿಯ ವಿಶ್ವ ದೃಷ್ಟಿಕೋನ ಮತ್ತು ವಿಶ್ವ ದೃಷ್ಟಿಕೋನವಲ್ಲ", ಕಾರಣಕ್ಕೆ ಒಳಪಡದ ಪ್ರಜ್ಞೆ, ಬದಲಿಗೆ ಪೂರ್ವ–ಸಮಂಜಸವಾದ ಪ್ರಜ್ಞೆ, ಕನಸುಗಳು, ಕಲ್ಪನೆಗಳನ್ನು ಒಳಗೊಂಡಿರುತ್ತವೆ. ಪೌರಾಣಿಕ ಕಥೆಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಖ್ಯಾತ ಸಾಹಿತಿಗಳು ಹಾಗೂ ವಿದ್ವಾಂಸರ ಪೌರಾಣಿಕ ಕುರಿತ ಬರಹಗಳು ದಿನ ಪತ್ರಿಕೆಗಳಲ್ಲಿ ಪ್ರಕಟಣೆಯಾಗಿವೆ. ಸಾಮಾನ್ಯವಾಗಿ ದಿನಪತ್ರಿಕೆಗಳಲ್ಲಿ ಕ್ರೈಂ, ಕ್ರೀಡೆ ಹಾಗೂ ಸಿನಿಮಾಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ. ಬಹುತೇಕ ಪತ್ರಿಕೆಗಳು ರಾಜಕೀಯಕ್ಕೆ ಸಂಬಂಧಿಸಿದ ಸುದ್ದಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿವೆ. ಆದರೆ

ಇತ್ತೀಚಿನ ದಿನದಲ್ಲಿ ಭೌಗೋಳಿಕ ನೆಲದ ಬಗ್ಗೆ ಮತ್ತು ಸಂಸ್ಕೃತಿ ಬಿಂಬಿಸುವ ಪೌರಾಣಿಕ ಕಥೆಗಳನ್ನು ತಿಳಿಸುವಲ್ಲಿ ಪತ್ರಿಕೆಗಳು ಮುಂದೆ ಬರಬೇಕಾಗುತ್ತದೆ. ಇದರಿಂದ ಯುವ ಜನತೆಯಲ್ಲಿ ಸಂಸ್ಕೃತಿ ಕುರಿತಂತೆ ಜಾಗೃತಿ ಮೂಡವಂತಾಗಬೇಕು. ಆದರೆ ಕನ್ನಡದಲ್ಲಿ 9 ಮುಖ್ಯವಾಹಿನಿಯ ಪತ್ರಿಕೆಗಳಿವೆ. ಆದರೆ ಪೌರಾಣಿಕ ಕಥಾ ಹಂದರ ಒಳಗೊಂಡತಹ ಲೇಖನಗಳು ಪ್ರಕಟವಾಗುವ ಪತ್ರಿಕೆಗಳು ಬೆರಳಣಿಕೆಯಷ್ಟು ಮಾತ್ರ. ಆದರಲ್ಲಿ ಕನ್ನಡದ ದಿನ ಪತ್ರಿಕೆಗಳಾದ ವಿಜಯವಾಣಿ ಹಾಗೂ ವಿಜಯ ಕರ್ನಾಟಕ ಪತ್ರಿಕೆಗಳು ಹೆಚ್ಚಾಗಿ ಪ್ರಾಮುಖ್ಯತೆ ನೀಡುತ್ತಿರುವುದು ವಿಶೇಷ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ವಿಜಯ ಕರ್ನಾಟಕ ಮತ್ತು ವಿಜಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆ ಹಂದರಗಳ ಲೇಖನಗಳನ್ನು ಸಂಶೋಧನೆಗೆ ಒಳಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ದಿನಪತ್ರಿಕೆ ವಾಚಕರು ಪೌರಾಣಿಕ ಕಥೆಗಳನ್ನು ಹೇಗೆ ಸ್ವೀಕರಿಸುತ್ತಾರೆ ಹಾಗೂ ಅವರ ಮೇಲೆ ಯಾವ ರೀತಿ ಪ್ರಭಾವ ಮತ್ತು ಪರಿಣಾಮವನ್ನು ಬೀರಿದೆ ಎಂಬುದನ್ನು ತಿಳಿಯುವ ಉದ್ದೇಶದಿಂದ ಕೂಡಿದೆ. ಮೇಲಿನ ಉದ್ದೇಶವನ್ನು ಅರಿಯಲು ಸಂಶೋಧಕರು, ಪರಿಮಾಣಾತ್ಮಕ ಸಂಶೋಧನ ವಿಧಾನವನ್ನು ಅಳವಡಿಸಿಲಾಗಿದೆ. ಈ ವಿಧದಲ್ಲಿ ಪ್ರಶ್ನಾವಳಿ ತಂತ್ರವನ್ನು ಬಳಸಿ ಜನರಿಂದ ಮಾಹಿತಿ ಪಡೆಯಲಾಗಿದೆ. ಓದುಗರ ಮೇಲೆ ದಿನಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆಗಳ ಓದುಗರ ಮೇಲೆ ಧನಾತ್ಮಕ ಮತ್ತು ಗುಣಾತ್ಮಕ ಪ್ರಭಾವವನ್ನು ಅಧ್ಯಯನದಲ್ಲಿ ಗಮನಿಸಬಹುದಾಗಿದೆ. ಈ ಅಧ್ಯಯನದಿಂದ ಪೌರಣಿಕ ಕಥೆಗಳು ಜನರಲ್ಲಿ ತಮ್ಮ ಸಂಸ್ಕಾರ, ಮೌಲ್ಯ, ಬಾಂಧವ್ಯ ಆದರ್ಶ ಅರಿಯಲು ಸಹಕಾರಿಯಾಗಿದೆ ಎಂದು ತಿಳಿದುಬಂದಿದೆ. ಈ ಮೂಲಕ ಪತ್ರಿಕೆಗಳಿಗೂ ತಾವು ಪ್ರಕಟಿಸುತ್ತಿರುವ ಪೌರಣಿಕ ಕಥೆಗಳ ಪ್ರಭಾವವನ್ನು ಅರಿಯಲು ಸಾಧ್ಯವಾಗಿದೆ.

**ಮೂಲ ಪದ:** ಪೌರಾಣಿಕ, ದಿನಪತ್ರಿಕೆ, ವಿಜಯಕರ್ನಾಟಕ, ವಿಜಯವಾಣಿ, ಕಥೆ, ಬರಹಗಾರ.

**ಪೀಠಿಕೆ:**

ಪುರಾಣಗಳು ಯಾವುದೇ ಸಂಸ್ಕೃತಿ ಅಥವಾ ಧರ್ಮದಲ್ಲಿ ಅದಕ್ಕೆ ಸಂಬಂಧಿತ ದಂತಕಥೆಗಳ ಸಮೂಹ. ಪುರಾಣಗಳು ಆಡುಭಾಷೆಯ ರೂಪದಲ್ಲಿ ಅಥವಾ ಲಿಖಿತ ರೂಪದಲ್ಲಿ ಸಾಂಪ್ರದಾಯಿಕವಾಗಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲಾಗುತ್ತವೆ. ಅನೇಕ ಬಾರಿ ಇವುಗಳು ಆ ಸಂಸ್ಕೃತಿಯ ಅಥವಾ

ಧರ್ಮದ ನಾಯಕರ ಅಥವಾ ದೇವತೆಗಳ ಅತಿಮಾನುಷ ಕಾರ್ಯಗಳನ್ನು ರಂಜಿತವಾಗಿ ವರ್ಣಿಸುತ್ತವೆ. ಹೆಸರೇ ಹೇಳುವಂತೆ ಪುರಾಣಗಳು ಪುರಾಣಗಳೇ ಆಗಿವೆ ಇವುಗಳನ್ನು ಇತಿಹಾಸ ಎಂದು ಕರೆದಿಲ್ಲ. ಪುರಾಣಗಳು ಒಟ್ಟು ಹದಿನೆಂಟು ಇವೆ. ಹಾಗೆಯೇ ಹದಿನೆಂಟು ಉಪ ಪುರಾಣಗಳೂ ಇವೆ ಎನ್ನಲಾಗಿದೆ. ಒಂದೊಂದು ಪುರಾಣಗಳು ಒಂದೊಂದು ದೇವರನ್ನು ವೈಭವೀಕರಿಸಿ ರಚಿಸಲಾಗಿದೆ, ಒಂದಕ್ಕೊಂದು ವಿರೋಧಾಭಾಸ ಇದೆ. ಪುರಾಣಗಳಲ್ಲಿ ಎಲ್ಲಾ ಗುಣಗಳ ಮಿಶ್ರಣ ಇದೆ. ಪುರಾಣಗಳಲ್ಲಿನ ಉತ್ತಮ ಅಂಶವನ್ನು ಮಾತ್ರ ನಾವು ಗ್ರಹಿಸುವ ಅಗತ್ಯವಿದೆ. ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳು ಓದವುದರಿಂದ ಜನರಲ್ಲಿ ಒಳ್ಳೆಯ ಮೌಲ್ಯ ಬೆಳೆಯುತ್ತದೆ.

ಪೌರಾಣಿಕ ಕಥೆಗಳಿಂದ ನಾವು ಮಾತ್ರವಲ್ಲ, ಮಕ್ಕಳು ಕಲಿಯುವುದು ಕೂಡ ಸಾಕಷ್ಟಿದೆ. ಪುರಾಣಗಳಲ್ಲಿನ ನೈತಿಕ ಮೌಲ್ಯಗಳು ಅವರ ಜೀವನಕ್ಕೆ ದಾರಿ ದೀಪವಾಗಬಹುದು. ಪುರಾಣಗಳಿಂದ ಕಲಿಯಬೇಕಾದ ನೈತಿಕ ಪಾಠ, ಪ್ರತಿಯೊಂದು ಸಂಸ್ಕೃತಿಯು ತನ್ನದೇ ಆದ ಪುರಾಣವನ್ನು ಹೊಂದಿದೆ. ವೀರ ಪಾತ್ರಗಳು, ಪೌರಾಣಿಕ ವೀರರು, ದೇವರುಗಳ ಮತ್ತು ಅದ್ಭುತ ಸ್ಥಳಗಳ ಕಥೆಗಳನ್ನು ಒಳಗೊಂಡಿರುತ್ತದೆ. ನಮ್ಮ ಪುರಾಣಗಳಲ್ಲಿನ ಕಥೆಗಳು ಕೇವಲ ವಯಸ್ಕರಿಗೆ ಮಾತ್ರವಲ್ಲ, ಮಕ್ಕಳಿಗೂ ಕೂಡ ಜೀವನ ಪಾಠವನ್ನು, ನೈತಿಕ ಮೌಲ್ಯವನ್ನು ತಿಳಿಸುತ್ತದೆ. ಜೀವನದಲ್ಲಿ ಪುರಾಣಗಳಿಂದ ಅಳವಡಿಸಿಕೊಳ್ಳಬೇಕಾದ ಸಾಕಷ್ಟು ಜೀವನ ಮೌಲ್ಯಗಳಿವೆ. ಉದಾಹರಣೆಗೆ ನೋಡುವುದಾದರೆ,

ಏಕಲವ್ಯ ತನ್ನ ಬುಡಕಟ್ಟು ಜನಾಂಗದವರೊಂದಿಗೆ ಕಾಡಿನಲ್ಲಿ ವಾಸಿಸುತ್ತಿದ್ದ ಬಾಲಕ. ಜಗತ್ತಿನ ಅತ್ಯುತ್ತಮ ಬಿಲ್ಲುಗಾರನಾಗಬೇಕೆಂಬ ಹಂಬಲ ಅವರ ಜೀವನದ ಮುಖ್ಯ ಉದ್ದೇಶ. ಬಿಲ್ವಿದ್ಯೆಯನ್ನು ಕಲಿಸಲು ದ್ರೋಣರ ಬಳಿ ಕೇಳಿದಾಗ ಆತನ ಜಾತಿಯು ಅಡ್ಡ ಬರುತ್ತದೆ. ಕೀಳು ಜಾತಿಯಲ್ಲಿ ಹುಟ್ಟಿದವನೆಂಬ ಕಾರಣಕ್ಕೆ ದ್ರೋಣರು ಬಿಲ್ವಿದ್ಯೆ ಕಲಿಸಲು ನಿರಾಕರಿಸತ್ತಾರೆ. ನಂತರ ದ್ರೋಣರನ್ನೇ ತನ್ನ ಗುರುವೆಂದು ಭಕ್ತಿಯಿಂದ ಭಾವಿಸಿ ದ್ರೋಣರ ಮಣ್ಣಿನ ಪ್ರತಿಮೆಯನ್ನು ಮಾಡಿ ಅದರ ಮುಂದೆ ಬಿಲ್ವಿದ್ಯೆಯನ್ನು ಅಭ್ಯಾಸ ಮಾಡಿ ಮಹಾನ್ ಬಿಲ್ಲುಗಾರನಾಗುತ್ತಾನೆ. ಏಕಲವ್ಯನ ಬಿಲ್ವಿದ್ಯೆ ಚಾತುರ್ಯವನ್ನು ಕಂಡ ದ್ರೋಣರು ಈತ ತನ್ನ ಶಿಷ್ಯ ಅರ್ಜುನನ್ನೇ ಸೋಲಿಸುತ್ತಾನೆಂಬ ಭಯದಲ್ಲಿ ಆತನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದುಕೊಳ್ಳುತ್ತಾನೆ. ಇಲ್ಲದಿದ್ದರೆ ಏಕಲವ್ಯನು ಅರ್ಜುನನ

ಬಿಲ್ವಿದ್ಯೆ ಕಲೆಯನ್ನು ಮೀರಿಸಿ ತಾನೇ ಉತ್ತಮ ಬಿಲ್ಲುಗಾರನಾಗಿರುತ್ತಿದ್ದನು. ಇದರಿಂದ ತಿಳಿಯುವುದೇನೆಂದರೆ, ಶಿಕ್ಷಕರಿಗೆ ಮತ್ತು ಬೋಧಕರಿಗೆ ಗೌರವ ಕೊಡುವುದನ್ನು ಕಲಿಯುವುದು ಹಾಗೂ ಕಠಿಣ ಪರಿಶ್ರಮ ಜೀವನದ ಮೂಲಾಧಾರವೆಂಬುದು ಅರಿವಾಗುತ್ತದೆ.

ಅದೇ ರೀತಿಯಲ್ಲಿ ಶ್ರವಣ ಬಡ ಹದಿಹರೆಯದ ಹುಡುಗ. ಶ್ರವಣನು ತನ್ನ ವಯಸ್ಸಾಗಿದ್ದ ಮತ್ತು ಕುರುಡರಾಗಿದ್ದ ತಂದೆ – ತಾಯಿಯನ್ನು ಬುಟ್ಟಿಯಲ್ಲಿ ಕುಳಿಸಿಕೊಂಡು, ಆ ಬುಟ್ಟಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ತೀರ್ಥಯಾತ್ರೆಗೆಂದು ಹೋಗುತ್ತಿರುತ್ತಾನೆ. ಅಯೋಧ್ಯೆಯಲ್ಲಿ ಕಾಡನ್ನು ದಾಟುವಾಗ ತಂದೆ–ತಾಯಿಗೆ ನೀರು ತರಲು ಕೊಳದ ಬಳಿ ಹೋಗುತ್ತಾನೆ. ಪ್ರಾಣಿ ನೀರು ಕುಡಿಯುತ್ತಿರಬಹುದೆಂದು ತಪ್ಪಾಗಿ ಭಾವಿಸಿದ ರಾಜ ದಶರಥನು ಬಾಣವನ್ನು ಹೊಡೆಯುತ್ತಾನೆ. ಶ್ರವಣ ಕುಮಾರನು ನೀರನ್ನು ಪೋಷಕರಿಗೆ ನೀಡುವಂತೆ ದಶರಥನ ಬಳಿ ಕೇಳಿಕೊಂಡು ಸ್ಥಳದಲ್ಲೇ ಮರಣ ಹೊಂದುತ್ತಾನೆ. ಇದರಿಂದ ತಿಳಿಯುವ ಅಂಶ ಏನೆಂದರೆ ಶ್ರವಣನು ದಯೆ ಮತ್ತು ನಿಷ್ಠೆಯ ಸಾಕಾರವಾಗಿದ್ದಾನೆ. ಈ ಕಥೆಯು ಸಹಾನುಭೂತಿಯ ಸದ್ಗುಣಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಪೋಷಕರನ್ನು ಹೇಗೆ ಗೌರವಿಸಬೇಕು.. ನೋಡಿಕೊಳ್ಳಬೇಕೆಂಬುದನ್ನು ತಿಳಿಸುತ್ತದೆ.

ಅದೇ ರೀತಿ 'ಸುರ್ದಾಸ್‌ರ ಭಕ್ತಿ'ಯ ಈ ಕಥೆಯು ಸುರ್ದಾಸರ ನಿಷ್ಕಲ್ಮಶ ಭಕ್ತಿಯನ್ನು ಹೇಳುತ್ತದೆ. ನಮ್ಮ ವಸ್ತುಗಳ ಬಗ್ಗೆ ನಾವೆಷ್ಟು ಕಾಳಜಿಯನ್ನು ವಹಿಸಬೇಕೆನ್ನುವುದನ್ನು ಇದು ತಿಳಿಸುತ್ತದೆ. 'ಅಭಿಮನ್ಯು'ವಿನ ಕಥೆಯು ಅಭಿಮನ್ಯುವಿನ ತ್ಯಾಗವು, ಕೌಟುಂಬಿಕ ನಿಷ್ಠೆ, ಧೈರ್ಯ, ಘನತೆ ಮತ್ತು ಪ್ರೀತಿಯ ಬಗ್ಗೆ ಅರಿವು ಮೂಡಿಸುತ್ತದೆ. 'ರಾಮನ ದೃಢತೆ'ಯ ಕಥೆಯು ಸಹ ಜನರಲ್ಲಿ ಹಾಗೂ ಮಕ್ಕಳಲ್ಲಿ ಮಗುವಿಗೆ ಸ್ನೇಹ, ಸಮಗ್ರತೆ ಮತ್ತು ಪ್ರೀತಿಯ ಬಗ್ಗೆ ಕಲಿಸುತ್ತದೆ. 'ದುರ್ಗೆಯ ಶಕ್ತಿ' ಈ ಕಥೆ ಮಹಿಳೆಯರೂ ಸಹ ಹೆಚ್ಚಿನ ಧೈರ್ಯ, ಶಕ್ತಿ ಮತ್ತು ಸದಾಚಾರವನ್ನು ಹೊಂದಿರುತ್ತಾರೆಂಬುದನ್ನು ಹೇಳುತ್ತದೆ. 'ಪ್ರಹ್ಲಾದನ ನಂಬಿಕೆ ಮತ್ತು ದೈವ ಭಕ್ತಿ' ಈ ಕಥೆ ನಂಬಿಕೆ, ಭಕ್ತಿ ಮತ್ತು ತಾಳ್ಮೆಯ ಮೌಲ್ಯಗಳನ್ನು ಕಲಿಸುತ್ತದೆ. 'ಅರ್ಜುನನ ಏಕಾಗ್ರತೆ' ಇದು ಗಮನ ಮತ್ತು ದೃಢ ನಿಶ್ಚಯದ ಕುರಿತಾದ ಒಂದು ಕಥೆಯಾಗಿದೆ, ಇದು ನಾವು ಏನು ಬಯಸುತ್ತಾರೆ ಎಂಬುದನ್ನು ನಿಖರವಾಗಿ ತಿಳಿದುಕೊಳ್ಳಲು ಮತ್ತು ಅದರ ಕಡೆಗೆ ಗಮನ ಹರಿಸುವುದರಿಂದ

ಗುರಿಯನ್ನು ಸಾಧಿಸಬಹುದೆನ್ನುವುದನ್ನು ಹೇಳುತ್ತದೆ. 'ರಾಮ ಮತ್ತು ಸೀತಾ' ವನವಾಸದಿಂದ ಅಂತಹ ಕಠಿಣ ಪರಿಸ್ಥಿತಿಯಲ್ಲೂ ಮಹಿಳೆಯರು ಇನ್ನೂ ದೃಢ, ಧೈರ್ಯಶಾಲಿ ಮತ್ತು ಸ್ವತಂತ್ರರಾಗಿರಲು ಹೇಗೆ ಸಾಧ್ಯ ಎಂದು ಈ ಕಥೆ ವಿವರಿಸುತ್ತದೆ. 'ಮಂಡೋದರಿಯ ತಾಳ್ಮೆ' ಈ ಕಥೆಯು ಜೀವನದಲ್ಲಿ ತಾಳ್ಮೆ ಎಷ್ಟು ಮುಖ್ಯ ಎನ್ನುವುದನ್ನು ಅರ್ಥಮಾಡಿಸುತ್ತದೆ. ಈ ರೀತಿಯಲ್ಲಿ ಪೌರಾಣಿಕ ಕಥೆಗಳನ್ನು ಓದುವುದರಿಂದ ನೀತಿಯನ್ನು ಜೀವದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಆದ್ದರಿಂದ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆಗಳು ಜನತೆ ಹಾಗೂ ಯುವಪೀಳಿಗೆಗೆ ಇಂದು ಅತಿ ಮುಖ್ಯವಾಗಿದೆ ಎಂದು ಹೇಳಬಹುದು.

**ಸಮಸ್ಯೆಯ ಹೇಳಿಕೆ:**

ಕನ್ನಡ ದಿನಪತ್ರಿಕೆಗಳು ಬೇರೆ ಬೇರೆ ಅಂದರೆ ಸಿನಿಮಾ, ರಾಜಕೀಯ, ಕ್ರೀಡೆ ಮುಂತಾದ ಸುದ್ದಿಗಳಿಗೆ ಪ್ರಾಮುಖ್ಯತೆ ನೀಡುತ್ತಾ ಬಂದಿವೆ. ಆದರೆ ಈ ಕುರಿತಂತೆ ಅನೇಕ ಅಧ್ಯಯನಗಳು ಸಹ ನಡಿದಿದೆ. ಆದರೆ ಪೌರಾಣಿಕ ಕಥೆಗಳು ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದರ ಕುರಿತಂತೆ ನಡೆದಿರುವ ಅಧ್ಯಯನಗಳು ಕಡಿಮೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಪೌರಾಣಿಕ ಕಥೆಗಳ ಪ್ರಾತಿನಿದ್ಯತೆ, ವಾಚಕರ ಸ್ವೀಕೃತಿ ಮತ್ತು ಪ್ರಭಾವದ ಕುರಿತು ಉತ್ತರ ಹುಡುಕುತ್ತದೆ.

**ಸಾಹಿತ್ಯ ವಿಮರ್ಶೆ:**

**ಸೈಯದ್ ಮುಯಿನ್. (2021)** ಅವರ ಪ್ರಕಾರ ಜನರು ತಮ್ಮ ಭಾವನೆಗಳನ್ನು ಎಷ್ಟರಮಟ್ಟಿಗೆ ವ್ಯಕ್ತಪಡಿಸುತ್ತಾರೆ, ಎಂಬುದಕ್ಕೆ ಸ್ಪಷ್ಟ ವ್ಯತ್ಯಾಸಗಳಿವೆ. ಭಾವನಾತ್ಮಕ ಅಭಿವ್ಯಕ್ತಿಯ ವ್ಯತ್ಯಾಸಗಳು ದೀರ್ಘಕಾಲದಿಂದಲೂ ಆಸಕ್ತ ಸಂಶೋಧಕರನ್ನು ಗಮನಹರಿಸಿದೆ ಮತ್ತು ಈ ವ್ಯತ್ಯಾಸಗಳು ಮನೋವಿಜ್ಞಾನದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿವೆ. ಭಾವನೆಯು ಜೈವಿಕ ಮತ್ತು ನಡವಳಿಕೆಯ ಬದಲಾವಣೆಗಳೊಂದಿಗೆ ಸಂಕೀರ್ಣವಾದ, ವ್ಯಕ್ತಿನಿಷ್ಠ ಅನುಭವವಾಗಿದೆ. ನರಮಂಡಲವು ಭಾವನೆ, ಆಲೋಚನೆಗಳನ್ನು ಸಕ್ರಿಯಗೊಳಿಸುವಿಕೆ, ದೈಹಿಕ ಬದಲಾವಣೆಗಳು ಮತ್ತು ನಡವಳಿಕೆಯ ಬದಲಾವಣೆಗಳನ್ನು ಒಳಗೊಂಡಿರುತ್ತದೆ.

**ಡಾ. ಜಿ. ಜಿ. ಹೆಗಡೆ (2014)** ಅವರ ಪ್ರಕಾರ ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಕಥೆಗಳನ್ನು ಓದುವುದುವುದರ ಮೂಲಕ ನಮ್ಮ ಜೀವನ

ಮೌಲ್ಯಗಳು ನಮ್ಮ ಬದುಕಿಗೆ ಪ್ರೇರಣೆಯನ್ನು ನೀಡುತ್ತವೆ. ನಮ್ಮ ನೆಲ, ಜಲ ಸಂಸ್ಕೃತಿಯ ಕುರಿತು ನಮ್ಮಲ್ಲಿ ಅರಿವು ಮೂಡುತ್ತದೆ ಹಾಗೂ ಯುವ ಪೀಳಿಗೆಗೆ ಅತ್ಯವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**ಎ. ಜೆ. ಸುರೇಶ್** (2014) ಹೇಳುವಂತೆ 'ಪೌರಾಣಿಕ ಕಥೆಗಳು ಕೇವಲ ಮನರಂಜನೆ ಮಾಧ್ಯಮವಾಗಿ ಇರುವುದಲ್ಲದೆ, ಅದು ಸಮಾಜಮುಖಿಯಾಗಿದೆ ಹಾಗೂ ಸಮಾಜದ ಪರಿವರ್ತನೆಗೆ ಸಾಂಸ್ಕೃತಿಕ ಮಾಧ್ಯಮವಾಗಿರುವುದರಿಂದ ಇಂದಿಗೂ ಪೌರಾಣಿಕ ಕಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಬಹುದಾಗಿದೆ.

**ಅಧ್ಯಯನದ ವ್ಯಾಪ್ತಿ:**

ಪೌರಾಣಿಕ ಕಥೆಗಳ ಮಾಹಿತಿಯಿಂದ ಒಳ್ಳೆಯ ಮೌಲ್ಯ, ಆದರ್ಶವನ್ನು ಜೀವನಕ್ಕೆ ಅಳವಡಿಸಿಕೊಳ್ಳಬಹುದು. ಈ ಹಿನ್ನಲೆಯಲ್ಲಿ ಪೌರಾಣಿಕ ಕಥೆಗಳು ಅತ್ಯವಶ್ಯಕವಾಗಿದೆ. ಪುರಾಣಗಳು ಯುವಜನತೆ ಹಾಗೂ ಜನರಲ್ಲಿ ಉತ್ತಮ ಆದರ್ಶ ಮೌಲ್ಯಗಳನ್ನು ಬೆಳೆಸುತ್ತವೆ. ಮಕ್ಕಳಲ್ಲಿ ಹಿರಿಯರಿಗೆ ಗೌರವ ಕೊಡುವುದು, ತಂದೆ–ತಾಯಿಯನ್ನು ನೋಡಿಕೊಳ್ಳುವುದು, ಸಮಾಜದಲ್ಲಿ ಉತ್ತಮ ಜೀವನ ಮೌಲ್ಯಗಳು ಮುಖ್ಯವಾಗಿ ಇರಬೇಕಾಗುತ್ತದೆ. ಈ ಪೌರಾಣಿಕ ಕಥೆಗಳು ಪ್ರಸ್ತುತವಾಗಿ ಮುಂದಿನ ಪೀಳಿಗೆಗೆ ಅಥವಾ ಯುವಪೀಳಿಗೆಗೆ ಅಷ್ಟಾಗಿ ಪರಿಚಯ ಇರುವುದಿಲ್ಲ. ಪೌರಾಣಿಕ ಕಥೆಗಳನ್ನು ಯುವಜನತೆಯಲ್ಲಿ ಪರಿಚಯಿಸುವದು ಉತ್ತಮವಾಗಿದೆ. ಇಂತಹ ಮೌಲ್ಯಗಳು ಇರುವ ಪುರಾಣ ಕಥೆಗಳನ್ನು ಇತ್ತೀಚಿನ ದಿನಗಳಲ್ಲಿ ಕೆಲವು ದಿನಪತ್ರಿಕೆಗಳು ಪ್ರಕಟಿಸುವ ಮೂಲಕ ಯುವ ಜನತೆಗೆ ಅರಿವು ಮೂಡಿಸುವಲ್ಲಿ ಪಾತ್ರ ವಹಿಸುತ್ತಿರುವುದು ನಾವು ತಿಳಿಯಬಹುದು. ಪೌರಾಣಿಕ ಕತೆಗಳನ್ನು ಕನ್ನಡ ದಿನಪತ್ರಿಕೆಗಳು ಜನರಿಗೆ ಪರಿಚಯಿಸುವ ಕಾರ್ಯ ಮಾಡುತ್ತಿವೆ. ಅದು ಯಾವ ರೀತಿ ಪರಿಣಾಮಕಾರಿಯಾಗಿದೆ ಎಂದು ತಿಳಿಯುವುದು ಪ್ರಸ್ತುತ ಅಧ್ಯಯನವಾಗಿದೆ.

**ಉದ್ದೇಶಗಳು:**

ಕನ್ನಡ ದಿನ ಪತ್ರಿಕೆಗಳೂ ಮೊದಲಿಂದಲೂ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿದೆ. ವಾಚಕರಲ್ಲಿ ಅನೇಕ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಅರಿವನ್ನು ತರುವಲ್ಲಿ ಪತ್ರಿಕೆಗಳು ಪ್ರಯತ್ನ ಮಾಡುತ್ತಿವೆ. ಕೆಲವೊಮ್ಮೆ ದಿನ ಪತ್ರಿಕೆಗಳು ಪುರಾಣ ಕಥೆಗಳನ್ನು ಜನರಿಗೆ ನೆನೆಪಿಸುತ್ತಾ ಬಂದಿದೆ. ಈ ಅಧ್ಯಯನದ ನಿರ್ದಿಷ್ಟ ಉದ್ದೇಶಗಳೆಂದರೆ,

- ಕನ್ನಡ ದಿನಪತ್ರಿಕೆ ವಾಚಕರು ಪೌರಾಣಿಕ ಕಥೆಗಳನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಅಧ್ಯಯನ ಮಾಡಲು.
- ವಾಚಕರ ಮೇಲೆ ಈ ಪೌರಾಣಿಕ ಕಥೆಗಳು ಉಂಟುಮಾಡಿರುವ ಪ್ರಭಾವ ಮತ್ತು ಪರಿಣಾಮವನ್ನು ಅನ್ವೇಷಿಸಲು.

**ಸಂಶೋಧನಾ ವಿನ್ಯಾಸ:**


ಸಂಶೋಧನಾ ಸಮಸ್ಯೆಯ ಆಧಾರದ ಮೇಲೆ ಅಗತ್ಯ ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆಯ ಸಂಶೋಧನಾ ವಿಧಾನವನ್ನು ಆಯ್ಕೆ ಮಾಡಲಾಗುತ್ತದೆ. ಇದು ಪ್ರಶ್ನಾವಳಿಯೊಂದಿಗೆ ಸಮೀಕ್ಷೆಯ ಆಧಾರದ ಮೇಲೆ ಪರಿಮಾಣಾತ್ಮಕ ಅಧ್ಯಯನವಾಗಿದೆ. ರಚನಾತ್ಮಕ ಪ್ರಶ್ನಾವಳಿಯ ಮೂಲಕ ಸಮೀಕ್ಷೆಯನ್ನು ನಡೆಸಲಾಗುತ್ತದೆ. ಕನ್ನಡ ದಿನ ಪತ್ರಿಕೆಗಳಾದ ವಿಜಯಕರ್ನಾಟಕ ಮತ್ತು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆಗಳನ್ನು ಸಕ್ರಿಯವಾಗಿರುವ ವಾಚಕರ ಆಕಸ್ಮಿಕ ಮಾದರಿ ವಿಧಾನದ ಮೂಲಕ ಪ್ರಾಥಮಿಕ ಅಂಕಿ–ಅಂಶಗಳನ್ನು ಸಂಗ್ರಹಿಸಲಾಗುತ್ತದೆ.

ನಮೂನೆಯ ಆಯ್ಕೆಯ ವಿಧಾನ: ವಿಜಯ ಕರ್ನಾಟಕ ಪತ್ರಿಕೆಯ ಓದುಗರು 25.88 ಹಾಗೂ ವಿಜಯವಾಣಿ ಪತ್ರಿಕೆಯನ್ನು 23.51 ಲಕ್ಷ ಓದುಗರು ಇದ್ದಾರೆ. ಕ್ರೇಜ್ಸಿ ಮತ್ತು ಮೋರ್ಗಾನ್ (1970) ಅವರು ನೀಡಿರುವ ನಮೂನೆ ಆಯ್ಕೆಯ ಸೂತ್ರ ಬಳಸಿ 80 ಮಾದರಿಗಳನ್ನು ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗಿದೆ. ಮಾದರಿಗಳು ಬೆಂಗಳೂರು ಮತ್ತು ಸುತ್ತಮುತ್ತಲಿನ ಗ್ರಾಮೀಣ ಮತ್ತು ನಗರ ಪ್ರದೇಶದಾದ್ಯಂತ ಒಳಗೊಂಡಿದೆ. ವಿಜಯಕರ್ನಾಟಕ ಮತ್ತು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆಗಳ ವಿಷಯಗಳ ಗುಣಾತ್ಮಕ ವಿಶ್ಲೇಷಣೆಯ ಮೂಲಕ ಅಂಕಿ–ಅಂಶಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ದತ್ತಾಂಶವನ್ನು ನಿಗದಿತ ಉದ್ದೇಶಗಳಿಗೆ ತೀರ್ಮಾನಗಳನ್ನು ತೆಗೆದುಕೊಳ್ಳಲು ವಿಶ್ಲೇಷಿಸಲಾಗುತ್ತದೆ.


**ದತ್ತಾಂಶ ವಿಶ್ಲೇಷಣೆ:**

ಪ್ರಸ್ತುತ ಅಧ್ಯಯನದಲ್ಲಿ ಪ್ರಶ್ನಾವಳಿಯ ಮೂಲಕ ಕಲೆಹಾಕಿದ ಮಾಹಿತಿಯನ್ನು ಎಂ.ಎಸ್. ಎಕ್ಸೆಲ್ ಅನ್ನು ಬಳಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. 80 ಪ್ರತಿಕ್ರಿಯೆದಾರರಲ್ಲಿ ನಗರ 57 ಹಾಗೂ ಗ್ರಾಮೀಣ ಪ್ರದೇಶದ


23 ಜನ ಒಳಗೊಂಡಿದ್ದಾರೆ. ಅವರಲ್ಲಿ ಗೃಹಿಣಿಯರು, ಖಾಸಗಿ ನೌಕರರು, ಸರ್ಕಾರಿ ನೌಕರರು ಹಾಗೂ ಸ್ವಯಂ ಉದ್ಯೋಗ ಹೊಂದಿರುವರು ಪ್ರತಿಕ್ರಿಯೆದಾರರಾಗಿದ್ದಾರೆ.





ಕನ್ನಡ ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳ ಕುರಿತಂತೆ 80 ಜನರಿಗೆ ಪ್ರಶ್ನಾವಳಿಯನ್ನು ನೀಡಿ ಪ್ರತಿಕ್ರಿಯೆ ಪಡೆಯಲಾಯಿತು. ಲಿಂಗಕ್ಕೆ ಸಂಬಂದಿಸಿದಂತೆ ಕೇಳಿದ 80 ಜನ ಪ್ರತಿಕ್ರಿಯೆದಾರರಲ್ಲಿ 54 (ಶೇ.67.5) ಹೆಂಗಸರು ಹಾಗೂ 26(ಶೇ.32.5) ಗಂಡಸರು ಆಗಿದ್ದಾರೆ. ಹೆಚ್ಚಿನ ಪ್ರತಿಕ್ರಿಯೆದಾರರು ಮಹಿಳೆಯರು ಆಗಿದ್ದಾರೆ.




ಇವರುಗಳ ವಯಸ್ಸಿನ ಸರಾಸರಿ ಗಮನಿಸುವುದಾದರೆ ಶೇ.42.5 ರಷ್ಟು 21ರಿಂದ30 ರ ವಯಸ್ಸಿನವರಾಗಿದ್ದರೆ, ಶೇ.30 ರಷ್ಟು ಜನ 31 ರಿಂದ 40 ವಯಸ್ಸಿನವರಾಗಿದ್ದು, ಶೇ.15 ರಷ್ಟು 41 ರಿಂದ 50 ವಯಸ್ಸಿನವರು ಹಾಗೂ ಶೇ.12.5 ರಷ್ಟು ಜನ 51 ಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದಾರೆ. ಒಟ್ಟಾರೆಯಾಗಿ ಹೆಚ್ಚಿನ ಪ್ರತಿಕ್ರಿಯೆದಾರರು ಯುವಜನ ಆಗಿರುವುದು ಗಮನಿಸಬಹುದಾಗಿದೆ.





ಪ್ರತಿಕ್ರಿಯೆದಾರರ ಶೈಕ್ಷಣಿಕ ಮಟ್ಟವನ್ನು ಗಮನಿಸುವುದಾದರೆ ಶೇ.30.8 ರಷ್ಟು ಮಂದಿ ಸ್ನಾತಕೋತ್ತರ ಪದವಿ ಮಟ್ಟ ಹೊಂದಿದರೆ, ಶೇ.20.5 ರಷ್ಟು ಜನ ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಉಳಿದಂತೆ ಶೇ.23.1 ಮತ್ತು ಶೇ.25.6 ರಷ್ಟು ಕ್ರಮವಾಗಿ ಪದವಿ ಹಾಗೂ ಮಾದ್ಯಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಒಟ್ಟಾರೆಯಾಗಿ ಗಮನಿಸಿದಾಗ ಪ್ರತಿಕ್ರಿಯೆದಾರರ ಶೈಕ್ಷಣಿಕ ಮಟ್ಟ ಹೆಚ್ಚಾಗಿ ಬಹುತೇಕರು ಸ್ನತಕೋತ್ತರ ಪದವಿ ಪಡೆದವರೆ ಆಗಿದ್ದಾರೆ.





ಪ್ರತಿಕ್ರಿಯೆದಾರರ ಉದ್ಯೋಗವನ್ನು ನೋಡುವುದಾದರೆ ಶೇ42.5 ರಷ್ಟು ಜನ ಗೃಹಿಣಿಯರಾಗಿದ್ದು, ಶೇ.12.5 ಮಂದಿ ಖಾಸಗಿ ನೌಕರರು ಆಗಿದ್ದು, ಕ್ರಮವಾಗಿ ಶೇ.27.5 ಮತ್ತು ಶೇ.17.5 ರಷ್ಟು ಜನ ಸರ್ಕಾರಿ ನೌಕರರು ಹಾಗೂ

ನಿರುದ್ಯೋಗಿಗಳಾಗಿದ್ದಾರೆ. ಒಟ್ಟಾರೆಯಾಗಿ ಗಮನಿಸುವುದಾದರೆ ಗೃಹಣೀಯರೆ ಹೆಚ್ಚು ಪತ್ರಿಕೆಯನ್ನು ಓದುವ ವರ್ಗವಾಗಿದೆ.





ಪ್ರತಿಕ್ರಿಯೆದಾರರ ಎಷ್ಟು ಸಮಯ ಪತ್ರಿಕೆಯನ್ನು ಓದುವರಿದ್ದಾರೆ ಎಂದು ಗಮನಿಸಿದಾಗ ಶೇ.52.5 ರಷ್ಟು ಜನ ಒಂದು ಗಂಟೆ ಹಾಗೂ ಕನಿಷ್ಠ ಶೇ.5 ರಷ್ಟು ಜನ 4ಗಂಟೆಗಿಂತ ಹೆಚ್ಚು ಸಮಯ ಪತ್ರಿಕೆಯನ್ನು ಓದುವುದಾಗಿ ತಿಳಿಸಿದ್ದಾರೆ. ಒಟ್ಟಾರೆ ದಿನ ಪತ್ರಿಕೆಯನ್ನು ಒಂದು ಗಂಟೆಕ್ಕಿಂತ ಕಡಿಮೆ ಅವಧಿ ಓದುಗರೆ ಹೆಚ್ಚು ಪ್ರತಿಕ್ರಿಯೆದಾರರಾಗಿದ್ದಾರೆ.





ಯಾವ ದಿನ ಪತ್ರಿಕೆಯನ್ನು ಓದಲು ಇಚ್ಛೆಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯೆದಾದರು ಶೇ.60 ರಷ್ಟು ವಿಜಯಕರ್ನಾಟಕ ಹಾಗೂ ಶೇ.40 ರಷ್ಟು

ವಿಜಯವಾಣಿ ಪತ್ರಿಕೆಯನ್ನು ಓದಲು ಇಚ್ಛಿಸಿದ್ದಾರೆ ಎಂದು ತಿಳಿದು ಬಂದಿದೆ, ಎಂದು ಪ್ರಸ್ತುತ ಅಧ್ಯಯನದಲ್ಲಿ ತಿಳಿದುಬಂದಿದೆ.





ಪತ್ರಿಕೆಯಲ್ಲಿ ಯಾವ ಸುದ್ದಿಗೆ ಪ್ರಾಮುಖ್ಯತೆ ನೀಡುತ್ತೀರಾ ಎಂದು ಪ್ರತಿಕ್ರಿಯೆದಾರರನ್ನು ಕೇಳೀದ್ದಾಗ ಶೇ.57.5 ರಷ್ಟು ಸಾಂಸ್ಕೃತಿಕ ವಿಷಯ ಹಾಗೂ ಶೇ.2.5 ರಷ್ಟು ಕ್ರೀಡಾ ಸುದ್ದಿ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಅದೇ ರೀತಿ ಶೇ.15 ರಷ್ಟು ಸಿನಿಮಾ ಸದ್ದಿ, ಶೇ.12.5 ರಷ್ಟು ರಾಜಕೀಯ ಸುದ್ದಿ, ಉಳಿದಂತೆ ಶೇ12.5 ರಷ್ಟು ಪ್ರತಿಕ್ರಿಯೆದಾರರು ಸ್ಥಳೀಯ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸುದ್ದಿಯನ್ನು ಓದುಗರಾಗಿದ್ದಾರೆ. ಇದರಿಂದ ಅರ್ಥವಾಗುವುದು ಏನೆಂದರೆ ಸಾಂಸ್ಕೃತಿಕ ಸಂಬಂಧಿಸಿದ ವಿಷಯವನ್ನು ಹೆಚ್ಚು ಓದುವುದಾಗಿ ಪ್ರತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ.





ದಿನ ಪತ್ರಿಕೆಯಲ್ಲಿ ಪ್ರಕಟವಾಗುವ ಪೌರಾಣಿಕ ಕಥೆಗಳನ್ನು ಗಮನಿಸುವುದಾದರೆ ಶೇ.100ರಷ್ಟು ಅಧ್ಯಯನಕ್ಕೆ ಒಳಪಡಿಸಿದ ಪ್ರತಿಕ್ರಿಯೆದಾರರು

ಒಪ್ಪಿಕೊಂಡಿದ್ದಾರೆ. ಪೌರಾಣಿಕ ಕಥೆಗಳು ಶೇ.57.5 ವಿಜಯಕರ್ನಾಟಕ ಹಾಗೂ ಶೇ.42.5 ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತವೆ ಎಂದು ಪ್ರತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ.





ಕನ್ನಡ ದಿನ ಪತ್ರಿಕೆಗಳಲ್ಲಿ ಪೌರಾಣಿಕ ಕಥೆಗಳನ್ನು ನಿರಂತರ ವಾಚಕರು ಶೇ.85 ಹಾಗೂ ಶೇ.15 ರಷ್ಟು ಜನ ಆಗಾಗ ಓದುತ್ತೇವೆ ಎಂದು ಪ್ರತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ. ಒಟ್ಟಾರೆಯಾಗಿ ಎಷ್ಟೇ ಕಾಲ ಬದಲಾದರೂ ಪುರಾಣ ಕಥೆಗಳನ್ನು ಓದುವುದರಲ್ಲಿ ಜನರು ಇಚ್ಛಿಸುತ್ತಾರೆ ಎಂದು ತಿಳಿದು ಬಂದಿದೆ.





ದಿನ ಪತ್ರಿಕೆಗಳು ಪೌರಾಣಿಕ ಕಥೆಗಳನ್ನು ಪ್ರಕಟನೆ ಮಾಡಲು ಒತ್ತು ನೀಡುತ್ತವೆ ಎಂದು ಶೇ.90 ರಷ್ಟು ಹಾಗೂ ಶೇ.10 ರಷ್ಟು ಪ್ರಾಮುಖ್ಯತೆ ನೀಡಲ್ಲ ಎಂದು ಪ್ರತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ. ಒಟ್ಟಿನಲ್ಲಿ ಪೌರಾಣಿಕ ಕಥೆಗಳನ್ನು ಪ್ರಕಟನೆ ಮಾಡಲು ಪತ್ರಿಕೆಗಳು ಮುಂದಿವೆ ಎಂದು ಜನರು ಒಪ್ಪಿಕೊಂಡಿದ್ದಾರೆ ಎಂದು ತಿಳಿಯುತ್ತದೆ. ಪೌರಾಣಿಕ ಕಥೆಗಳನ್ನು ಶೇ.97.5 ರಷ್ಟು ಮಂದಿ ನಿರೀಕ್ಷಿಸುತ್ತಾರೆ ಹಾಗೂ ಶೇ.2.5 ರಷ್ಟು ನಿರೀಕ್ಷಸುವುದಿಲ್ಲ ಎಂದು ಪ್ರತಿಕ್ರಿಯೆದಾರರು


ಒಪ್ಪಿಕೊಂಡಿದ್ದಾರೆ. ಒಟ್ಟಾರೆ ಇತ್ತೀಚಿನ ದಿನಗಳಲ್ಲಿ ಪುರಾಣ ಕಥೆಗಳನ್ನು ಜನರು ಹೆಚ್ಚಿನ ರೀತಿಯಲ್ಲಿ ನಿರೀಕ್ಷಿಸುತ್ತಾರೆ ಎಂದು ತಿಳಿದು ಬರತ್ತದೆ.




ಪೌರಾಣಿಕ ಕಥೆಗಳನ್ನು ಓದುವುದರಿಂದ ಜನರ ಜೀನದ ಮೇಲೆ ಶೇ.97.4 ಪ್ರಭಾವ ಹಾಗೂ ಶೇ.2.6 ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಪ್ರತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ. ಇಲ್ಲಿ ತಿಳಿಯುವ ಅಂಶ ಏನೆಂದರೆ ಪೌರಾಣಿಕ ಕಥೆಗಳನ್ನು ಓದುವುದರಿಂದ ಜೀವನದಲ್ಲಿ ಪ್ರಭಾವ ಬೀರಿದೆ ಎಂದು ಪತ್ರಿಕೆ ಓದುಗರು ಒಪ್ಪಿಕೊಂಡಿದ್ದಾರೆ.



ದಿನ ಪತ್ರಿಕೆಯಲ್ಲಿ ಮೂಡಿಬರುವ ಪೌರಾಣಿಕ ಕಥೆಗಳನ್ನು ಓದುವುದರಿಂದ ಯಾವ ರೀತಿಯ ಪ್ರಭಾವ ಬೀರಿದೆ ನೋಡುವುದಾದರೆ, ಈ ಕುರಿತು ಕೇಳಿದ ಪ್ರಶ್ನೆಗೆ 75 ಮೌಲ್ಯಯುತ ಜೀವನ ಮಾಡಲು, 55 ಸಂಸ್ಕಾರ ಕಲಿಯಲು, 66 ಹಿರಿಯರನ್ನು ಗೌರವದಿಂದ ಕಾಣುವುದು, 70 ಸಹಾಯ ಮನಸ್ಥಿತಿ ಹಾಗೂ 52 ರಷ್ಟು ಮಂದಿ ಕಪಟ ಮೋಸವನ್ನು ಮಾಡದಂತೆ ಇರುವುದು ಎಂದು ಪ್ರತಿಕ್ರಿಯೆದಾರರೂ ಒಪ್ಪಿಕೊಂಡಿದ್ದಾರೆ. ಒಟ್ಟಾರೆಯಲ್ಲಿ ಪುರಾಣಗಳನ್ನು ಓದುವುದರಿಂದ ಜೀವನದಲ್ಲಿ ಒಳ್ಳೆಯ ಮೌಲ್ಯಯುತ ಜೀವನ ಮಾಡಬಹುದು ಎಂದು ಜನರು ಒಪ್ಪಿಕೊಂಡಿದ್ದಾರೆ.




ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳನ್ನು ಓದುವುದರಿಂದ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಪ್ರಶ್ನೆಗೆ; ಮಾನವೀಯ ಮೌಲ್ಯ (65), ಮಾನಸಿಕ ಪರಿಣಾಮ (40), ನಡತೆಯ ಮೇಲೆ (75), ಭಾಷೆಯ ಮೇಲೆ (70) ಹಾಗೂ ದೃಷ್ಟಿಕೋನದ ಮೇಲೆ (33) ಮೇಲೆ ಪರಿಣಾಮ ಬೀರಿದೆ ಎಂದು ಮಾಹಿತಿದಾರರು ಉತ್ತರ ನೀಡಿದ್ದಾರೆ. ಒಟ್ಟಾರೆಯಾಗಿ ಹೆಚ್ಚು ಪ್ರತಿಕ್ರಿಯೆದಾರರು ನಡೆತೆಯ ಮೇಲೆ ಮರಿಣಾಮ ಬೀರುತ್ತದೆ ಎಂದು ಒಪ್ಪಿಕೊಂಡಿದ್ದಾರೆ.

ಒಟ್ಟಾರೆಯಾಗಿ ದಿನ ಪತ್ರಿಕೆಯಲ್ಲಿ ಪೌರಾಣಿಕ ಕಥೆ ಓದುವುದರಿಂದ ದೈವಿಕ ಭಾವನೆ ಮೂಡುತ್ತದೆ ಎಂದು ಪ್ರತಿಕ್ರಿಯೆದಾರರು ಒಪ್ಪಿದ್ದಾರೆ. ಇತ್ತಿಚಿನ ದಿನಗಳಲ್ಲಿ ಪೌರಾಣಿಕ ಕಥೆಗಳ ಅವಶ್ಯಕತೆ ಇದೆ ಎಂದು ಶೇ 97ರಷ್ಟು ಪತ್ರಿಕೆ ಓದುಗರು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಾರೆಯಾಗಿ ದಿನ ಪತ್ರಿಕೆಗಳಲ್ಲಿ

ಮೂಡಿಬರುವ ಪೌರಾಣಿಕ ಕಥೆಗಳು ಪ್ರಾಮುಖ್ಯತೆ ಇದೆ ಎಂದು ವಾಚಕರು ಅಭಿಪ್ರಾಯ ಪಟ್ಟಿದ್ದಾರೆ.

**ಉಪಸಂಹಾರ:**

ಕನ್ನಡ ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳ ಕುರಿತಂತೆ ಒಟ್ಟಾರೆಯಾಗಿ ಹೆಚ್ಚಿನ ಪ್ರತಿಕ್ರಿಯೆದಾರರು ಯುವಜನ ಆಗಿರುವುದು ಗಮನಿಸಲಾಗಿದೆ. ಕನ್ನಡ ದಿನ ಪತ್ರಿಕೆನಗಳನ್ನು ಓದುವವರು ಬಹುತೇಕ ಸ್ನಾತಕೋತ್ತರ ಹಾಗೂ ಪದವಿ ಪಡೆದವರು ಆಗಿದ್ದಾರೆ. ಅದೇ ರೀತಿಯಲ್ಲಿ ಗೃಹಣಿಯರೆ ಹೆಚ್ಚು ಪತ್ರಿಕೆಯ ಓದುಗರು ಎಂದು ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿದೆ. ಪತ್ರಿಕೆಯನ್ನು ದಿನದಲ್ಲಿ ಕನಿಷ್ಟ ಒಂದು ಗಂಟೆಯಾದರು ಓದುವ ಜನರಿದ್ದಾರೆ ಎಂಬುದು ತಿಳಿಯಿತು. ದಿನ ಪತ್ರಿಕೆಯಲ್ಲಿ ಪ್ರಕಟವಾಗುವ ಸಾಂಸ್ಕೃತಿ ಸಂಬಂದಿಸಿದ ಸುದ್ದಿ ಓದುವುದಾಗಿ ಪ್ರಿತಿಕ್ರಿಯೆದಾರರು ಒಪ್ಪಿಕೊಂಡಿದ್ದಾರೆ. ವಿಜಯಕರ್ನಾಟಕ ಹಾಗೂ ವಿಯಜವಾಣಿ ದಿನ ಪತ್ರಿಕೆಗಳು ಪೌರಾಣಿಕ ಕಥೆಗಳನ್ನು ಪ್ರಕಣೆ ಮಾಡುತ್ತಿದೆ. ಹೆಚ್ಚಿನ ಕಥೆಗಳನ್ನು ಪ್ರಕಟಣೆ ಮಾಡಬೇಕು ಎಂಬುದು ಎಲ್ಲರ ಜನರ ಆಶಾಯವಾಗಿದೆ. ಅದೇ ರೀತಿಯಲ್ಲಿ ಎಲ್ಲ ಪತ್ರಿಕೆಗಳಲ್ಲಿ ಎಲ್ಲ ಜನತೆಗೆ ನಮ್ಮ ಪುರಾಣಗಳ ಬಗ್ಗೆ ಅರಿವು ಮೂಡಿಸುವಲ್ಲಿ ಇತ್ತೀಚಿನ ದಿನದಲ್ಲಿ ಪತ್ರಿಕೆಗಳ ಪಾತ್ರ ಅತಿ ಮುಖ್ಯವಾಗಿದೆ. ಎಷ್ಟೇ ಕಾಲ ಬದಲಾದರೂ ಪುರಾಣ ಕಥೆಗಳನ್ನು ಓದುವುದನ್ನು ಜನರು ಇಚ್ಚಿಸುತ್ತಾರೆ ಎಂದು ತಿಳಿದು ಬಂದಿದೆ. ದಿನ ಪತ್ರಿಕೆಯಲ್ಲಿ ಮೂಡಿಬರುವ ಪೌರಾಣಿಕ ಕಥೆಗಳನ್ನು ಓದುವುದರಿಂದ ಮೌಲ್ಯಯುತ ಜೀವನ ಮಾಡಲು, ಸಂಸ್ಕಾರ ಕಲಿಯಲು, ಹಿರಿಯರನ್ನು ಗೌರವದಿಂದ ಕಾಣುವುದು, ಸಹಾಯ ಮನಸ್ಥಿತಿ ಹಾಗೂ ಕಪಟ ಮೋಸವನ್ನು ಮಾಡದಂತೆ ಇರುವುದು ಈ ಮೌಲ್ಯಗಳು ಪ್ರಭಾವ ಬೀರುತ್ತವೆ ಎಂದು ಜನರು ಒಪ್ಪಿಕೊಂಡಿದ್ದಾರೆ. ಮಾನವೀಯ ಮೌಲ್ಯ, ಮಾನಸಿಕ ಪರಿಣಾಮ, ನಡತೆಯ ಮೇಲೆ, ಬಾಷೆಯ ಮೇಲೆ, ಹಾಗೂ ದೃಷ್ಟಿಕೋನದ ಮೇಲೆ ಜನರುಗಳ ಮೇಲೆ ಪರಿಣಾಮ ಬೀರಿದೆ ಎಂದು ಪತ್ರಿಕೆ ವಾಚಕರು ಹೇಳಿದ್ದಾರೆ. ಪುರಾಣಗಳನ್ನು ಓದುವುದರಿಂದ ಜೀವನದಲ್ಲಿ ಒಳ್ಳೆಯ ಮೌಲ್ಯಯುತ ಜೀವನ ಮಾಡಬಹುದು ಎಂದು ಜನರು ಒಪ್ಪಿಕೊಂಡಿದ್ದಾರೆ. ಹಾಗೂ ಪುರಾಣಗಳನ್ನು ಓದುವುದರಿಂದ ಜೀವನದಲ್ಲಿ ಒಳ್ಳೆಯ ಮೌಲ್ಯಯುತ ಜೀವನ ಮಾಡಬಹುದು ಎಂದು ಜನರು ಒಪ್ಪಿಕೊಂಡಿದ್ದಾರೆ. ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳು ಜನರಲ್ಲಿ ಅರಿವು ಮೂಡಿಸುತ್ತದೆ.

ಒಟ್ಟಾರೆಯಾಗಿ ದಿನ ಪತ್ರಿಕೆಯಲ್ಲಿ ಪೌರಾಣಿಕ ಕಥೆ ಓದುವುದರಿಂದ ದೈವಿಕ ಭಾವನೆ ಮೂಡುತ್ತದೆ. ದಿನ ಪತ್ರಿಕೆಗಳಲ್ಲಿ ಮೂಡಿಬರುವ ಪೌರಾಣಿಕ ಕಥೆಗಳಿಗೆ ಪ್ರಾಮುಖ್ಯತೆ ಇದೆ ಎಂದು ವಾಚಕರು ಅಭಿಪ್ರಾಯ ಪಟ್ಟಿದ್ದಾರೆ.

**ಉಲ್ಲೇಖಗಳು:**


1. ಸೈಯದ್ ಮುಯಿನ್ (2021), ಆಯ್ದ ಪುರಾಣ ಕಾವ್ಯಗಳಲ್ಲಿ ಪುರುಷ ಭಾವಗಳ ಒಳನೋಟ, ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ.
2. ಡಾ. ಜಿ. ಜಿ. ಹೆಗಡೆ, ಕನ್ನಡಪ್ರಭ, ಜನವರಿ 2014.
3. ಎ. ಜೆ. ಸುರೇಶ್, ಕನ್ನಡಪ್ರಭ, ಜನವರಿ 2014.
4. ಗರ್ಬ್ನರ್, ಜಿ. & ಗ್ರಾಸ್, ಎಲ್. (1976), ದೂರದರ್ಶನದೊಂದಿಗೆ ಜೀವನ: ಹಿಂಸೆ ಪ್ರೊಫೈಲ್, ಜರ್ನಲ್ ಆಫ್ ಕಮ್ಯುನಿಕೇಶನ್, 26 (2), 172–199.
5. ಗರ್ಬ್ನರ್, ಜಿ., ಗ್ರಾಸ್, ಎಲ್., ಮೋರ್ಗಾನ್, ಎಂ., ಸಿಗ್ನೊರಿಲ್ಲಿ, ಎನ್., & ಜಾಕ್ಸನ್–ಬೀಕ್, ಎಂ. (1979), ಶಕ್ತಿಯ ಪ್ರದರ್ಶನ: ಹಿಂಸೆಯ ವಿವರ, ಜರ್ನಲ್ ಆಫ್ ಕಮ್ಯುನಿಕೇಶನ್, 29 (10), 177–196.
6. ಕೆ. ಅನಂತರಾಮರಾವ್, ಮಹಾಭಾರತ, ವಿದ್ಯಾ ಪಬ್ಲಿಷಿಂಗ್ ಹೌಸ್, 2015.
7. ಎಸ್. ಎಲ್. ಶೇಷಗಿರಿರಾವ್, ಗ್ರೀಕ್ ರಂಗಭೂಮಿ ಮತ್ತು ನಾಟಕ, ಸಪ್ನ ಬುಕ್ ಹೌಸ್, ಬೆಂಗಳೂರು, 2013.
8. ಎಸ್. ಎಲ್. ಶೇಷಗಿರಿರಾವ್, ಪಾಶ್ಚಾತ್ಯ ಸಾಹಿತ್ಯ ವಿಹಾರ, ಸಪ್ನ ಬುಕ್ ಹೌಸ್, ಬೆಂಗಳೂರು, 2013.